ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಗುರುವಾರ, ೨೨, ಜನವರಿ, ೨೦೨೬(ಮಾಘ, ೦೨, ಶಕವರ್ಷ, ೧೯೪೭)	ಸಂಚಿಕೆ ೧೪
Volume - 161	BENGALURU, THURSDAY, 22, JANUARY, 2026(MAGHA, 02, SHAKAVARSHA,, 1947)	Issue 14

ಭಾಗ ೪ಎ

ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

GOVERNMENT OF KARNATAKA

No: RD 44 TNR 2026

Karnataka Government Secretariat
M.S. Building,
Dr.B.R. AmbedkarVeedhi,
Bengaluru, Dated:19.01.2026

NOTIFICATION

In exercise of the powers conferred by sub-section (2) of section 4 of the Indian Census Act, 1948, (Act No.37 of 1948), the Government of Karnataka is pleased to appoint all the Chief Executive Officers of Zilla Panchayats as Additional Principal Census Officers within the meaning of the said sub-section to supervise the taking of the census within jurisdiction of their respective Zilla Panchayats.

By Order and in the name of the
Governor of Karnataka

(Narasimhamurthy G.K.)
Under Secretary to Government
Revenue Department (DM & Ser-3)

PR-36

ಕರ್ನಾಟಕ ಸರ್ಕಾರ

ಸಂ: ಟಿಡಿ 55 ಟಿಡಿಎಸ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾ. ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 16.01.2026.

ತಿದ್ದುಪಡಿ/ಸೇರ್ಪಡೆ

ಸರ್ಕಾರದ ತಿದ್ದುಪಡಿ/ಸೇರ್ಪಡೆ ಆದೇಶ ಸಂಖ್ಯೆ:ಟಿಡಿ 55 ಟಿಡಿಎಸ್ 2019, ದಿನಾಂಕ:02.01.2026 ನ್ನು ತಕ್ಷಣದಿಂದ ಹಿಂಪಡೆಯಲಾಗಿದೆ. ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಟಿಡಿ 55 ಟಿಡಿಎಸ್ 2019 ದಿನಾಂಕ:25-05-2022ರ ಟಿಪ್ಪಣಿ ಕ್ರ.ಸಂ 02ರ ನಂತರ ಸದರಿ ಸಂರಚನೆಯಲ್ಲಿ ಹೆಚ್ಚುವರಿಯಾಗಿ ನೇಮಿಸಬಹುದಾದ ಅಧಿಕಾರಿಗಳ ಕ್ರ.ಸಂ11 ರನ್ನು ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

11. ಹೆಚ್ಚುವರಿ ನಿರ್ದೇಶಕರು/ಜಂಟಿ ನಿರ್ದೇಶಕರು/ಸಹಾಯಕ ನಿರ್ದೆಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ.

ಮುಂದುವರೆದು, ರಸ್ತೆ, ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ ಭಾರತ ಸರ್ಕಾರ ಇವರ ಪತ್ರ ಸಂಖ್ಯೆ: RT-25043/03/2017-RSC- Part(1) (204522) ದಿನಾಂಕ:20/06/2025 ರಲ್ಲಿ "ನಗದು ರಹಿತ ಚಿಕಿತ್ಸಾ ಯೋಜನೆ -2025" ರನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ನೀಡಿರುವ ನಿರ್ದೆಶನ ಅನುಸಾರ ದಿನಾಂಕ:25-05-2022 ರ ಆದೇಶದಲ್ಲಿನ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹೊಂದಿರಬೇಕಾದ ಹೊಣೆಗಾರಿಕೆ ಜವಾಬ್ದಾರಿ ಮತ್ತು ಕರ್ತವ್ಯಗಳಲ್ಲಿನ ಕ್ರಮಸಂಖ್ಯೆ 17 ಮತ್ತು 18 ನ್ನು ಕೈಬಿಡಲಾಗಿದ್ದು, ಕ್ರಮಸಂಖ್ಯೆ:16ರ ಅಂಶ (ii) ನಂತರ ಈ ಕೆಳಕಂಡ ಕ್ರಮ ಸಂಖ್ಯೆ ಮತ್ತು ಅಂಶಗಳನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

17. ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಅಧಿಸೂಚನೆ ಸಂಖ್ಯೆ: S.O. 2489 (E) ದಿನಾಂಕ 04.06.2025 ರಲ್ಲಿ ಸೂಚಿಸಲಾದ ಯೋಜನೆಯ ಮಾರ್ಗಸೂಚಿಗಳ ಪ್ಯಾರಾ 11 (ತಳಮಟ್ಟದ ಮೇಲ್ವಿಚಾರಣೆ) ರಲ್ಲಿ ಉಲ್ಲೇಖಿಸಲಾದ ನಿಬಂಧನೆಗಳ ಪ್ರಕಾರ ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆಗಾಗಿ ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಸಮನ್ವಯಗೊಳಿಸುವುದು.

18. ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಅಧಿಸೂಚನೆ ಸಂಖ್ಯೆ: S.O. 2489 (E) ದಿನಾಂಕ: 04.06.2025 ರಲ್ಲಿ ಸೂಚಿಸಲಾದ ಯೋಜನೆಯ ಮಾರ್ಗಸೂಚಿಗಳ ಪ್ಯಾರಾ 12 (ಜಿಲ್ಲಾಡಳಿತದಿಂದ ಕಾರ್ಯಾಚರಣೆಯ ಬೆಂಬಲ) ರಲ್ಲಿ ಉಲ್ಲೇಖಿಸಲಾದ ನಿಬಂಧನೆಗಳ ಪ್ರಕಾರ ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆಗಾಗಿ ಯೋಜನೆಯ ಅನುಷ್ಠಾನದ ಬಗ್ಗೆ ಗೊತ್ತುಪಡಿಸದ ಆಸ್ಪತ್ರೆಗಳನ್ನು ಸಂವೇದನಾಶೀಲಗೊಳಿಸುವುದು.

19. ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಅಧಿಸೂಚನೆ ಸಂಖ್ಯೆ: S.O. 2489 (E) ದಿನಾಂಕ 04.06.2025 ರಲ್ಲಿ ಸೂಚಿಸಲಾದ ಯೋಜನೆಯ ಮಾರ್ಗಸೂಚಿಗಳ ಪ್ಯಾರಾ 13 (ಕುಂದುಕೊರತೆ ನಿರ್ವಹಣೆ) ರಲ್ಲಿ ಉಲ್ಲೇಖಿಸಲಾದ ನಿಬಂಧನೆಗಳ ಪ್ರಕಾರ, ರಸ್ತೆ ಅಪಘಾತ ಸಂತ್ರಸ್ತರಿಗೆ ನಗದು ರಹಿತ ಚಿಕಿತ್ಸೆಗಾಗಿ ಯೋಜನೆಯ ಅನುಷ್ಠಾನದಿಂದ ಉಂಟಾಗುವ ಕುಂದುಕೊರತೆಗಳ ಪರಿಹಾರಕ್ಕಾಗಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯಿಂದ ಒಬ್ಬ ಕುಂದುಕೊರತೆ ನಿವಾರಣಾ ಅಧಿಕಾರಿಯನ್ನು ಮೀಸಲಿಟ್ಟು ನೇಮಿಸುವುದು.

ಸಮಿತಿಯು ಕಡ್ಡಾಯವಾಗಿ ಪ್ರತಿ ಹದಿನೈದು ದಿನಗಳಿಗೊಮ್ಮೆ virtual platform ಒಂದು ಸಭೆಯನ್ನು ಹಾಗೂ ಪ್ರತಿ ತಿಂಗಳಿಗೊಮ್ಮೆ ಎಲ್ಲಾ ಸದಸ್ಯರ ಭೌತಿಕ ಹಾಜರಾತಿಯಲ್ಲಿ ಅಧ್ಯಕ್ಷರು

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ನಿಗಧಿಪಡಿಸುವ ಸ್ಥಳದಲ್ಲಿ ಒಂದು ಸಭೆಯನ್ನು ನಡೆಸುವುದು ಸದರಿ ಸಭೆಗಳ ನಡವಳಿಗಳನ್ನು ಸಭೆ ನಡೆದ 48 ಘಂಟೆಗಳ ಒಳಗಾಗಿ:

i. ಅಧಿಕೃತ ಜಿಲ್ಲಾ ವೆಬ್‌ಸೈಟ್ ಜಾಲತಾಣಗಳಲ್ಲಿ ಪ್ರಕಟಿಸುವುದು;
ii. MoRTH ಪೋರ್ಟಲ್ (https://morth-roadsafety.nic.in/edisha.index.aspx) ನಲ್ಲಿ MoRTH ನಿಗಧಿಪಡಿಸಿರುವ ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು

ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳ ಸಮರ್ಪಕ ಕಾರ್ಯನಿರ್ವಹಣೆಗಾಗಿ ಅಗತ್ಯವಿರುವ ಹಾಗೂ ಪೂರಕ ವಿದ್ಯಾರ್ಹತೆ ಹೊಂದಿದ ಸಿಬ್ಬಂದಿಗಳನ್ನು ಯಾವುದೇ ಕೊರತೆ ಬಾರದ ರೀತಿಯಲ್ಲಿ ನೇಮಿಸಿಕೊಳ್ಳಲು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ / ರಾಜ್ಯ ಸರ್ಕಾರದ ಅಗತ್ಯ ನೆರವು ಪಡೆದುಕೊಳ್ಳುವುದು.

ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಟಿಡಿ 55 ಟಿಡಿಎಸ್ 2019, ದಿನಾಂಕ:25.05.2022 ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ
ಮತ್ತು ಅವರ ಹೆಸರಿನಲ್ಲಿ

(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

PR-37

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH